

ಶಿವರಾಜ್‌ಕುಮಾರ್ ಈಗಲೂ ಕನ್ನಡದ ಬ್ಯುಸಿ ನಟರಲ್ಲಿ ಒಬ್ಬರು. ಸಾಲು ಸಾಲು ಸಿನಿಮಾಗಳ ಚಿತ್ರೀಕರಣದಲ್ಲಿ ತೊಡಗಿಕೊಂಡಿರುವ ಅವರು ಖಡಕ್ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿರುವ 'ರುಸ್ತುಂ' ಸಿನಿಮಾ ಜೂನ್ 28ಕ್ಕೆ ಬಿಡುಗಡೆಯಾಗುತ್ತಿದೆ. ಮುಂದಿನ ತಿಂಗಳ ಮೊದಲ ವಾರ ಅವರು ಭುಜದ ಶಸ್ತ್ರಚಿಕಿತ್ಸೆಗಾಗಿ ಲಂಡನ್‌ಗೆ ಹೋಗುತ್ತಿದ್ದಾರಂತೆ. 'ರುಸ್ತುಂ' ಚಿತ್ರದ ಜೊತೆಗೆ ನಂತರ ಅವರು ನಟಿಸುತ್ತಿರುವ ಉಳಿದ ಸಿನಿಮಾಗಳ ಕುರಿತೂ ಶಿವಣ್ಣ ಇಲ್ಲಿ ಮಾತನಾಡಿದ್ದಾರೆ.

■ ಪದ್ಮನಾಭ ಭಟ್

# ಜಬರ್ದಸ್ತ್ ರುಸ್ತುಂ!

## ಸ್ವಾತಿ ನಾಟಕ ಪ್ರೀತಿ

1973ರಲ್ಲಿ ತೆರೆಕಂಡ 'ಎಡಕಲ್ಲು ಗುಡ್ಡದ ಮೇಲೆ' ಸಿನಿಮಾ ಹೆಸರು ಗೊತ್ತಿರದವರು ಕಡಿಮೆ. ಆದರೆ ಅದೇ ಹೆಸರಿನಲ್ಲಿ ಕಳೆದವರ್ಷ ತೆರೆಕಂಡ ಇನ್ನೊಂದು ಸಿನಿಮಾದ ಕುರಿತು ಹೆಚ್ಚಿನವರಿಗೆ ತಿಳಿದಿಲ್ಲ. ಈ ಚಿತ್ರದ ಮೂಲಕ ಬೆಳ್ಳಿತೆರೆಗೆ ಅಡಿಯಿಟ್ಟವರು ಸ್ವಾತಿ ಶರ್ಮ. ಆ ಸಿನಿಮಾದ ನಂತರ ಸ್ವಾತಿ ಮತ್ಯಾವ ಚಿತ್ರವನ್ನೂ ಒಪ್ಪಿಕೊಂಡಿಲ್ಲ. ಹಾಗಾದರೆ ಅವರೇನು ಮಾಡುತ್ತಿದ್ದಾರೆ?

ಸದ್ಯಕ್ಕೆ ರಂಗಭೂಮಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಸ್ವಾತಿ. ಲಿಂಗದೇವರು ಹಳೆಮನೆ ರಚನೆಯ, ದಿಲೀಪ ಬಿ.ಎಂ. ನಿರ್ದೇಶನದ ಐತಿಹಾಸಿಕ ನಾಟಕವೊಂದರಲ್ಲಿ ಸ್ವಾತಿ ಮುಖ್ಯಪಾತ್ರದಲ್ಲಿ ನಟಿಸುತ್ತಿದ್ದಾರೆ. 'ನನಗೆ ನಾಟಕದಲ್ಲಿ ನಟಿಸಬೇಕು ಎಂಬ ಆಸೆ ಮೊದಲಿನಿಂದಲೂ ಇತ್ತು. ಆದರೆ ಅಷ್ಟೇ ಹೆದರಿಕೆಯೂ ಇತ್ತು. ಯಾಕೆಂದರೆ ಸಿನಿಮಾದಲ್ಲಿಯಾದರೆ ಟೇಕ್ ತೆಗೆದುಕೊಂಡು ನಟಿಸಿಬಿಡಬಹುದು. ಆದರೆ ನಾಟಕದಲ್ಲಿ ಇಡೀ ನಾಟಕದುದ್ದಕ್ಕೂ ಆ ಪಾತ್ರವೇ ನಾವಾಗಿ ಜೀವಿಸಬೇಕಾಗುತ್ತದೆ' ಎನ್ನುತ್ತಾರೆ ಸ್ವಾತಿ. ಈ ನಾಟಕದಲ್ಲಿ ಅವರು ದೇವದಾಸಿ ಪದ್ಧತಿಯಲ್ಲಿದ್ದುಕೊಂಡು ಅದನ್ನು ವಿರೋಧಿಸುವ ಹೆಣ್ಣಿನ ಪಾತ್ರದಲ್ಲಿ ನಟಿಸಿದ್ದಾರಂತೆ.

ರಂಗಭೂಮಿಯ ಸಖ್ಯ ಬೆಳೆಸಿಕೊಂಡೇ ಸಿನಿಮಾದಿಂದ ದೂರವಾಗಿದ್ದೀರಾ ಎಂದು ಕೇಳಿದರೆ 'ಇಲ್ಲ ನಾನು ಸಾಕಷ್ಟು ಚ್ಯೂಸಿ. ಇದೇ ಸಮಸ್ಯೆ ಆಗಿರುವುದು. ನೂರಾರು ಸಿನಿಮಾದಲ್ಲಿ ನಟಿಸುವುದಕ್ಕಿಂತ ನೆನಪಿನಲ್ಲುಳಿಯುವ, ತೃಪ್ತಿ ನೀಡುವ ಎರಡೇ ಸಿನಿಮಾದಲ್ಲಿ ನಟಿಸಿದರೂ ಸಾಕು ಎನ್ನುವುದು ನನ್ನ ಭಾವನೆ' ಎನ್ನುತ್ತಾರೆ ಸ್ವಾತಿ.

ಅಂದಹಾಗೆ ತೆಲುಗಿನ 'ಟ್ರೆಂಡು ಮಾರಿನ, ಫ್ರೆಂಡು ಮಾರಡು' ಎಂಬ ಸಿನಿಮಾದಲ್ಲಿ ಸ್ವಾತಿ ನಟಿಸುತ್ತಿದ್ದಾರೆ. ಕನ್ನಡದಲ್ಲಿಯೂ ಒಂದಿಷ್ಟು ಕಥೆಗಳನ್ನು ಕೇಳಿದ್ದಾರೆ. ಆದರೆ ಅವ್ಯಾವೂ ಅವರಿಗೆ ಇಷ್ಟವಾಗಿಲ್ಲ. ಹಾಗಾಗಿ ಒಳ್ಳೆಯ ಸ್ಕ್ರಿಪ್ಟ್‌ಗಾಗಿ ಕಾಯುತ್ತಿದ್ದಾರೆ ಸ್ವಾತಿ. ■

